# ಸೈಟ್‌ಕೇರ್ ಕ್ಯಾನ್ಸರ್ ಹಾಸ್ಪಿಟಲ್-ಆರ್‌ಎಕ್ಸ್ ಡಿಎಕ್ಸ್ ಸಹಭಾಗಿತ್ವ



ಬೆಂಗಳೂರು, ಅ.17- ಗುಣಮಟ್ಟದ ಕ್ಯಾನ್ಸರ್ ಆರೈಕೆಯ ಸಂಪರ್ಕ ಹೊಂದಲು ರೋಗಿಗಳಿಗೆ ಕೋವಿಡ್-19 ಸಾಂಕ್ರಾಮಿಕ ಅಡ್ಡಿಯಾಗದಿರುವ ಖಾತ್ರಿ ಮಾಡಿಕೊಳ್ಳಲು, ಸೈಟ್‌ಕೇರ್ ಕ್ಯಾನ್ಸರ್ ಹಾಸ್ಪಿಟಲ್, ಆರ್‌ಎಕ್ಸ್ ಡಿಎಕ್ಸ್ ಸಮನ್ವಯ್ ಮಲ್ಲೇಶ್ವರಂ ಜೊತೆಗೆ ಸಹಭಾಗಿತ್ವ ಪ್ರಕಟಿಸಿದೆ.

ಭಾರತದಲ್ಲಿ ಮೊಟ್ಟಮೊದಲ ಅಂಗ ಆಧಾರಿತ, ಕ್ಷೇತ್ರ ಕುರಿತಂತೆ ಗಮನ ಕೇಂದ್ರೀಕರಿಸಿದ ಕ್ಯಾನ್ಸರ್ ರೋಗಶಾಸ್ತ್ರ ಆರೈಕೆಯ ಖಾಸಗಿ ಆಸ್ಪತ್ರೆ ಮತ್ತು ಬೆಂಗಳೂರಿನ ಮುಂಚೂಣಿಯ ಬಹು ವಿಶೇಷತೆಯ ನೆರೆಹೊರೆಯ ಕ್ಲಿನಿಕ್‌ಗಳು ಒಂದಾಗಿ ಸೇರುವುದು, ಶೀಘ್ರ ಕ್ಯಾನ್ಸರ್ ಪತ್ತೆ ಮಾಡುವುದು ಮತ್ತು ಕ್ಯಾನ್ಸರ್ ರೋಗ ತಡೆಯುವಲ್ಲಿ ಸಕ್ರಿಯ ಕ್ರಮ ಕೈಗೊಳ್ಳುವುದನ್ನು ಕುರಿತಂತೆ ಭಾರತದಲ್ಲಿ ಕ್ರಮ ಕೈಗೊಳ್ಳುವುದಕ್ಕೆ ದಾರಿ ಮಾಡಿಕೊಡಲಿದೆ.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿದ ಸೈಟ್‌ಕೇರ್ ಕ್ಯಾನ್ಸರ್ ಹಾಸ್ಪಿಟಲ್‌ನ ಸಹಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ರಾಮು , ಸಾಂಕ್ರಾಮಿಕವು ನಮಗೆ ಕಲಿಸಿರುವ ಅನೇಕ ಅಮೂಲ್ಯ ಪಾಠಗಳಲ್ಲಿ ಸಹಭಾಗಿತ್ವದ ಶಕ್ತಿಯಲ್ಲಿ ಸೈಟ್‌ಕೇರ್ ದೃಢವಾಗಿ ನಂಬಿಕೆ ಹೊಂದಿದೆ. ಆರ್‌ಎಕ್ಸ್ ಡಿಎಕ್ಸ್ ಸಮನ್ವಯ್ ಪ್ರಾಥಮಿಕ ಹಂತದಲ್ಲಿ ಆರೋಗ್ಯ ಸೇವೆ ನೀಡುವಲ್ಲಿ ಗಮನಾರ್ಹ ಕೆಲಸ ಮಾಡುತ್ತಿದೆ.

ರೋಗ ತಡೆಯುವ ಮತ್ತು ಶೀಘ್ರ ಪತ್ತೆ ಮಾಡುವ ಕ್ರಮಗಳು, ಆರೋಗ್ಯ ಸುಧಾರಿಸುವ ನಮ್ಮ ಗುರಿಗಳನ್ನು ನಿಜವಾಗಿಸಲು ಅತ್ಯಂತ ಅಗತ್ಯ ಅಂಶಗಳಾಗಿವೆ. ಕ್ಯಾನ್ಸರ್‌ನಂತಹ ದೀರ್ಘಕಾಲದ ರೋಗಗಳಲ್ಲಿ ಇದು ಮತ್ತಷ್ಟು ಮುಖ್ಯವಾಗಿರುತ್ತದೆ. ಸೈಟ್ ಕೇರ್‌ನೊಂದಿಗೆ ಕ್ಯಾನ್ಸರ್ ವಿರುದ್ಧ ಹೋರಾಡುವಲ್ಲಿ ನಾವು ಬದ್ಧತೆ ಹೊಂದಿದ್ದೇವೆ ಎಂದರು.